ಮಹಿಳಾದಿನ ವಿಶೇಷ

# ‘ದೊಡ್ಮನೆ’ ಅಮ್ಮಂದಿರು!

ಗಾಂಧಿನಗರದಲ್ಲಿ ‘ದೊಡ್ಮನೆ’ ಎಂದು ಕರೆಸಿಕೊಳ್ಳುವ ‘ರಾಜ್ ಕುಟುಂಬ’ ಎಂದಾಕ್ಷಣ ಎಲ್ಲರಿಗೂ ರಾಜ್‌ಕುಮಾರ್, ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಹೀಗೆ ಹಲವು ನಟರ ಮುಖಗಳು ಕಣ್ಮುಂದೆ ಸುಳಿಯುತ್ತವೆ. ಆದರೆ, ಈ ತಾರಾಲಾಂಛನದ ಹಿಂದೆ, ಕುಟುಂಬವನ್ನು ಬಾಂಧವ್ಯದ ಬಂಧದಲ್ಲಿ ಕಟ್ಟಿದ, ಅಕ್ಕರೆಯ ತೊಟ್ಟಿಲಲ್ಲಿ ಸಲುಹಿದ, ಚಾಣಾಕ್ಷ ನಿರ್ವಹಣೆಯಲ್ಲಿ ಬೆಳೆಸಿದ ಹೆಣ್ಣುಜೀವಗಳ ಅಭಯಹಸ್ತವಿದೆ. ತಂಪುನೆರಳಿನ ರಾಜ್ ಕುಟುಂಬವೃಕ್ಷದ ನೆಲಮರೆಯ ಬೇರುಗಳಂಥ ಹೆಣ್ಣುಜೀವಗಳನ್ನು ರಾಘವೇಂದ್ರ ರಾಜ್‌ಕುಮಾರ್ ಇಲ್ಲಿ ನೆನಪಿಸಿಕೊಂಡಿದ್ದಾರೆ.

■ ನಿರೂಪಣೆ: **ಪದ್ಮನಾಭ ಭಟ್**



ನಾಗಮ್ಮ, ರಾಜ್‌ಕುಮಾರ್ ತಂಗಿ



ಪಾರ್ವತಮ್ಮ ರಾಜ್‌ಕುಮಾರ್



ಮಂಗಳಾ, ರಾಘವೇಂದ್ರ ರಾಜ್‌ಕುಮಾರ್ ಪತ್ನಿ

ನನ್ನ ಬಾಲ್ಯದ ದಿನಗಳಿಗೆ ಹೊರಳಿದರೆ ಅಮ್ಮನನ್ನು ಬಿಟ್ಟರೆ ನನಗೆ ತುಂಬ ನೆನಪಾಗುವುದು ಅಪ್ಪಾಜಿಯ ತಂಗಿ. ಅವರ ಹೆಸರು ನಾಗಮ್ಮ.

ಕುಟುಂಬದಲ್ಲಿ ನಮ್ಮ ತಂದೆ ರಾಜ್‌ಕುಮಾರ್‌ಗೆ ತುಂಬ ಬೆಂಬಲವಾಗಿದ್ದವರು ಮೂರು ಜನ. ಒಬ್ಬರು ನಮ್ಮ ಚಿಕ್ಕಪ್ಪ, ಅಂದರೆ ಅಪ್ಪಾಜಿಯ ತಮ್ಮ, ವರದರಾಜ್. ಇನ್ನೊಬ್ಬರು ನಮ್ಮ ಅತ್ತೆ, ಅಂದರೆ ಅಪ್ಪಾಜಿಯ ತಂಗಿ. ಮತ್ತೊಬ್ಬರು ನಮ್ಮಮ್ಮ.

ನಮ್ಮ ಮನೆಯಲ್ಲಿ ನಾಲ್ಕು ಸಂಸಾರಗಳು ಒಟ್ಟಿಗೆ ಇದ್ದವು. ಅಪ್ಪಾಜಿಯದು, ಅವರ ಇಬ್ಬರು ತಂಗಿಯರು ಮತ್ತು ತಮ್ಮನ ಸಂಸಾರ. ನಾವೆಲ್ಲರೂ ಬೆಳೆದಿದ್ದು ಒಟ್ಟಿಗೆ. 23 ಜನ ಮಕ್ಕಳು ಮನೆಯಲ್ಲಿದ್ದರು. ಅಮ್ಮ ತುಂಬ ಬ್ಯುಸಿ ಇರುತ್ತಿದ್ದರು. ಅಪ್ಪಾಜಿಯನ್ನು ನೋಡಿಕೊಳ್ಳುವುದು, ಸಿನಿಮಾ ಚಿತ್ರೀಕರಣ, ವ್ಯವಹಾರಗಳನ್ನು ನಿಭಾಯಿಸುತ್ತಿದ್ದದ್ದು ಅವರೇ. ಆದ್ದರಿಂದ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ನಮ್ಮತ್ತೆಗೆ ವಹಿಸಿ ಹೋಗುತ್ತಿದ್ದರು.

ಕುಟುಂಬದಲ್ಲಿ ಅಪ್ಪಾಜಿ ಒಬ್ಬರೇ ಸಂಪಾದನೆ ಮಾಡುತ್ತಿದ್ದವರು. ಸಿನಿಮಾ ಕಥೆಗಳನ್ನೆಲ್ಲ ಚಿಕ್ಕಪ್ಪ ನೋಡಿಕೊಳ್ಳುತ್ತಿದ್ದರು. ವ್ಯವಹಾರ ಅಮ್ಮ ನೋಡಿಕೊಳ್ಳುತ್ತಿದ್ದರು. ಮನೆಯನ್ನು ಅತ್ತೆ ನೋಡಿಕೊಳ್ಳುತ್ತಿದ್ದರು. ಈ ನಾಲ್ಕು ಶಕ್ತಿಗಳಿಂದಲೇ ನಮ್ಮ ಕುಟುಂಬ ಮೇಲೆ ಬಂದಿರುವುದು.

ನನ್ನ ಅತ್ತೆಯ ಬಗ್ಗೆ ಇನ್ನಷ್ಟು ಹೇಳಬೇಕು. ನಾನು ಹುಟ್ಟಿದ ಒಂದು ತಿಂಗಳಿಗೆ ನಾಗತ್ತೆಗೂ ಮಗಳು ಹುಟ್ಟಿದ್ದಳು. ಅವಳ ಹೆಸರು ಸರಸ್ವತಿ. ನಾನು ಆಗಸ್ಟ್ 15ಕ್ಕೆ ಹುಟ್ಟಿದರೆ ಸರಸ್ವತಿ ಸೆಪ್ಟೆಂಬರ್ 25ಕ್ಕೆ ಹುಟ್ಟಿದ್ದಳು. ನಾನಿನ್ನೂ ಒಂದೂವರೆ ತಿಂಗಳು ಮಗುವಾಗಿದ್ದಾಗಲೇ ಅಮ್ಮ ನನ್ನನ್ನು ಮನೆಯಲ್ಲಿ ಬಿಟ್ಟು ಶೂಟಿಂಗ್‌ಗೆ ಹೋಗಲಿಕ್ಕೆ ಶುರುಮಾಡಿದ್ದರು. ಆಗಿನ್ನೂ ನಾನು